## ಪತ್ರಿಕಾ ಪ್ರಕಟಣೆ

**ಬೆಂಗಳೂರು ನಗರ ರೈಲ್ವೇ ಪೊಲೀಸ್ ಠಾಣೆಯ ಮೊ.ಸಂ.17/2022 ಕಲಂ.395,201 ಐ.ಪಿ.ಸಿ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿ ಕಾರ್ಯಚರಣೆ ನಡೆಸಿರುವ ಬಗ್ಗೆ**

ದಿನಾಂಕ: 06/02/2022 ರಂದು ನಾಯಂಡಹಳ್ಳಿ ರೈಲು ನಿಲ್ದಾಣದ ಬಳಿ ಈ ಪ್ರಕರಣದ ಪಿರ್ಯಾದುದಾರರನ್ನು ಅಡ್ಡಗಟ್ಟಿ ಜಲ್ಲಿಕಲ್ಲಿನಿಂದ ತಲೆಗೆ ಹೊಡೆದು ಹಲ್ಲೆ ಮಾಡಿ ಮೊಬೈಲ್ ಪೋನ್ ಅನ್ನು ಕಿತ್ತುಕೊಂಡು ಹೋಗಿದ್ದ ಬಗ್ಗೆ ಬೆಂಗಳೂರು ನಗರ ರೈಲ್ವೇ ಪೊಲೀಸ್ ಠಾಣೆಯ ಮೊ.ಸಂ.17/2022 ಕಲಂ.395,201 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿದ್ದು, ಈ ಪ್ರಕರಣವನ್ನು ಪತ್ತೆ ಮಾಡಲು ಮಾನ್ಯ ಶ್ರೀ.ಭಾಸ್ಕರ್ ರಾವ್, ಐ.ಪಿ.ಎಸ್, ಎ.ಡಿ.ಜಿ.ಪಿ, ರೈಲ್ವೇಸ್, ಬೆಂಗಳೂರು ಮತ್ತು ಶ್ರೀಮತಿ. ಸಿರಿಗೌರಿ. ಡಿ.ಆರ್. ಐ.ಪಿ.ಎಸ್, ಪೊಲೀಸ್ ಅಧೀಕ್ಷಕರು ರೈಲ್ವೇಸ್, ಬೆಂಗಳೂರು ರವರ ಮಾರ್ಗದರ್ಶನದಲ್ಲಿ, ಬೆಂಗಳೂರು ನಗರ ರೈಲ್ವೆ ಪೊಲೀಸ್ ವೃತ್ತದ ವೃತ್ತ ನಿರೀಕ್ಷಕರಾದ ಶ್ರೀ ವಿ.ಶಿವಕುಮಾರ್ ರವರ ನೇತೃತ್ವದಲ್ಲಿ ಪಿ.ಎಸ್.ಐ ಶ್ರೀ.ಪುರುಷೋತ್ತಂ.ಎಂ.ಡಿ, ಎಎಸ್ಐ, ಶ್ರೀ. ಮುನಿಯಪ್ಪ, ಮು.ಆ–11 ಶ್ರೀ. ಅನಿಲ್ ಕುಮಾರ್, ಆ.ಸಂ.552 ಶ್ರೀ ಅಜಿತ್ ಅಗೇರಾ ಮತ್ತು ಆ.ಸಂ.84 ಶ್ರೀ. ಸುನಿಲ್‌ಕುಮಾರ್ ಕೆ.ಜಿ ಇವರುಗಳೊಂದಿಗೆ ಕಾರ್ಯಚರಣೆಯನ್ನು ನಡೆಸಿ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಒಟ್ಟು ಮೂರು ಜನ ಆರೋಪಿತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ತಂಡವು ನಡೆಸಿದ ತನಿಖಾ ಕಾರ್ಯಚರಣೆಯನ್ನು ಮೇಲಾಧಿಕಾರಿಗಳು ಶ್ಲಾಘಿಸಿರುತ್ತಾರೆ.

**ಬಂಧಿಸಿರುವ ಆರೋಪಿಗಳ ವಿವರ**

| | |
|---|---|
| 1. | **ಎ–2** ಆರೋಪಿ ವಯಸ್ಸು 22 ವರ್ಷ, ವೃತ್ತಿ– ಬಿಬಿಎಂಪಿ ಆಟೋ ಡ್ರೈವರ್, |
| 2. | **ಎ–5** ಆರೋಪಿ ತಿಲಕ್ @ ಸಂಜು @ ಆರು ಬೆರಳು ತಂದೆ ಲೇ. ಚಂದ್ರು, ವಃ– 20 ವರ್ಷ, ವೃತ್ತಿಃ– ಪ್ಲಂಬರ್ ಕೆಲಸ, |
| 3. | **ಎ–6** ಆರೋಪಿ ವಯಸ್ಸು 19 ವರ್ಷ, ವೃತ್ತಿಃ ಪ್ಲಂಬರ್ ಕೆಲಸ, |